

ಮಹಡಿಯಲ್ಲಿ ಹೆಗ್ಡೇರು ಇರುತ್ತಿದ್ದರೂ– ಅವರು ಕೆಳಗಡೆ ಯಾವತ್ತೂ ಬರದಿದ್ದರೂ, ಏನಾದರೂ ಹೇಳಿ–ಕೇಳಿ ಮಾಡೋದಕ್ಕೆ ಜನರನ್ನು ಅವರೇ ಕರೆಸುತ್ತಿದ್ದರೂ... ಮಹಡಿಯ ಉಳಿದ ಬಾವಂತಿ ಭಾಗದಲ್ಲಿ ಹೆಗ್ಡೆಯ ಧರ್ಮಪತ್ನಿಯೂ ಮತ್ತು ಅವರ ಒಬ್ಬಳೇ ಮಗಳು ಮಲಗುತ್ತಿದ್ದರು. ಅವರ ಪತ್ನಿ ಅತ್ಯಂತ ಸಾಧ್ವಿಮಣಿ. ಆಕೆ ತನ್ನ ಊಟ ಮುಗಿಸಿಕೊಂಡು ಮಗಳನ್ನು ಕರೆದುಕೊಂಡು– ಅದರಲ್ಲೂ ಪ್ರಾಯಕ್ಕೆ ಏರುತ್ತಿರುವ ಮಗಳನ್ನು ಕರೆದುಕೊಂಡು ಮಹಡಿಗೆ ಹೋಗಿ ಮಲಗಿ ಬಿಡುತ್ತಿದ್ದಳು.

ಹೆಗ್ಡೇರಿಗೆ ಇದ್ದುದು ಒಬ್ಬಳೇ ಮಗಳು. ಅವರಿಗೆ ಗಂಡು ಮಕ್ಕಳಾಗಿರಲಿಲ್ಲ. ಮತ್ತೆ ಹೆಣ್ಣು ಮಕ್ಕಳೂ ಆಗಲಿಲ್ಲ. ಮದುವೆಯಾದ ಕೂಡಲೆ ದೊಡ್ಡ ಹೆಗ್ಡೇರು ಸತ್ತು ಹೋಗಿದ್ದರಿಂದ ಪಟ್ಟ ಇವರಿಗೆ ಬಂತು. ಇಪ್ಪತ್ತು ವರುಷಕ್ಕೆ ಯಜಮಾನಿಕೆ ಬಂದರೆ ದೇಹ ಸೋರಿ ಹೋಗದೇ ಇನ್ನೇನಾಗುತ್ತೆ. ನಮ್ಮ ರಾಜರುಗಳ ಕಥೆ ಗೊತ್ತಲ್ಲ. ಅವರಿಗೆ ಮಕ್ಕಳಾಗೋದಿಲ್ಲ. ಯಾಕೆಂದರೆ ಅವರ ಹರೆಯವನ್ನೆಲ್ಲಾ ಅರಮನೆಯ ದಾಸಿಯರಿಗೆ ಧಾರೆ ಎರೆದಿರುತ್ತಾರೆ. ಇವರು ಖಾಲಿ ಕೊಡವಾದಾಗ ಅಂತಃಪುರಕ್ಕೆ ರಾಣಿ ಬರುತ್ತಾಳೆ. ಹೆಗ್ಡೇರು ಕಥೆಯೂ ಅಷ್ಟೇ. ಆದರೆ ಪುಣ್ಯವಶಾತ್ ಅವರಿಗೆ ಮಗಳಾದರೂ ಹುಟ್ಟಿದಳು. ಹೆಗ್ಡೇರ ಹೆಂಡತಿ ಪುಣ್ಯ.

ಪುಣ್ಯ ಅವರದ್ದು ಮಾತ್ರ ಅಲ್ಲ... ಮುಂದೆ ಹೇಳ್ತೀನಿ.

ಅಂದು–

ಕೊನೇ ದಿನದ ನವರಾತ್ರಿ. ವಿಜಯದಶಮಿ. ರಂಗೋ ರಂಗು. ಉನ್ಮತ್ತವಾದ ರಾತ್ರಿ. ಅವತ್ತು ಭಂಗಿ ಕುಡಿಯದವರೇ ಇಲ್ಲ. 'ಸ್ವಲ್ಪ, ಸ್ವಲ್ಪ' ಅಂತ ಪೂರ್ತಿ ತಂಬಿಗೆ ಎತ್ತುತ್ತಾರೆ. ಹೆಗ್ಡೇರು ಬೇಗ ಬೇಗ ಕುಡಿಯುತ್ತಾರೆ. ಯಾರೋ ನಾಚುವಾಲಿ ಬಂದು ಹೆಗ್ಡೇರ ತೊಡೆ ಮೇಲೆ ಕುಳಿತು ಭಂಗಿ ಪಾತ್ರೆ ಹಿಡಿಯುತ್ತಾಳೆ... ಆ ದಿನ ಮಾತ್ರ ಹೆಗ್ಡೇರು ಅಮಲಿನಲ್ಲಿ ಅಡ್ಡ ಬಿದ್ದಾದ ಮೇಲೂ 'ಉತ್ಸವ' ನಡೆದೇ ಇರುತ್ತೆ... ಆ ದಿನ ಹೀಗೆ ಆಯಿತು. ಹೆಗ್ಡೇರನ್ನು ಎತ್ತಿಕೊಂಡು ಮಹಡಿ ಹತ್ತುವಾಗಲೂ 'ಉತ್ಸವ' ನಡೆದೇ ಇತ್ತು.... ನಡುರಾತ್ರಿಯ ಉತ್ಸವ ಅದು, ನವರಾತ್ರಿಯ ಉತ್ಸವ ಅದು. ಹೆಗ್ಡೇರನ್ನು ಮಲಗಿಸಿ, ಹೊದಿಕೆ ಹೊದಿಸಿ ಬರುವಾಗ ಪಕ್ಕದಲ್ಲಿನ ಕೊಠಡಿಯಲ್ಲಿ ಹಣತೆ ದೀಪ ಇನ್ನೂ ಉರಿಯುತ್ತಿತ್ತು, 'ಆರಿಸಲು ಮರೆತಿರಬೇಕು' ಎಂದು ಕೊಠಡಿಯ ಬಾಗಿಲಲ್ಲಿ ಇಣುಕಿದೆ.

ಉಫ್! ಹಣುಕ ಬಾರದಿತ್ತು. ಆದರೆ ಹಣುಕಿಯಾಗಿತ್ತು. ಅದು ಹೆಗ್ಡೇರ ಪತ್ನಿಯ ಕೊಠಡಿ. ತಾಯಿ–ಮಗಳು ಅಲ್ಲಿ ಮಲಗಿದ್ದರು. ಮಗಳು ಮಗ್ಗಲಾಗುವಾಗ ಅವಳ ಸೆರಗು ಜಾರಿ ಹಸಿ ಹಸಿ ಯೌವ್ವನ ಬಿರಿದು ಕಾಣಿಸುತ್ತಿತ್ತು. ನನ್ನ ಮೈರಕ್ತದ ಬಿಸಿ ಏರಿತು. ರಕ್ತದೊತ್ತಡ ಹೆಚ್ಚಾಯಿತು. ಕೆಳಗಡೆ ಸದ್ದುಗದ್ದಲ ನಾಚುವಾಲಿಗಳ ಕುಣಿತ, ಇಸ್ಪೀಟು ಆಡುವವರ ನಗು, ಬೀಡಿ, ಸಿಗರೇಟುಗಳ ಹೊಗೆ, ಭಂಗಿಯ ನಶೆಯಲ್ಲಿ ಕೇಕೇ. ಗ್ಯಾಸ್‌ಲೈಟಿನ ಬೆಳಕಿನಲ್ಲಿ ಅರ್ಧಕಪ್ಪು, ಅರ್ಧ ಬೆಳಕು......

ನಾನು ನಿಧಾನವಾಗಿ ಹೋಗಿ ಹಣತೆ ದೀಪ ಆರಿಸಿ ಅವಳೊಡನೆ, ಅವಳ ಮಗ್ಗುಲಲ್ಲಿ ಮಲಗಿ ಹೊದಿಕೆ ಎಳೆದು ಕೊಂಡು ಬಿಟ್ಟೆ. ಇಡೀ ರಾತ್ರಿ ಮನ್ಮಥನ ಕೇಕೆಯೋ ಕೇಕೆ. ಆಕೆ ಇದನ್ನು ಸ್ವಪ್ನ ಎಂದು ತಿಳಿದಳೋ ಅಥವಾ ನಿಜವಾಗಿ ಅನುಭವಿಸಿದಳೋ– ತಿಳಿದವರು ಹೇಳಬೇಕು.

* * *

ನಾನು ಅಲ್ಲೇ ಠಿಕಾಣಿ ಹೂಡಿದ್ದೆ. ನನಗೆ ಗತ್ಯಂತರವಿರಲಿಲ್ಲ. ಊಟಕ್ಕೇ ತತ್ವಾರ. ಜೊತೆಗೆ ಆಕೆಯ ಮೈಹಸಿವು. ಹೆಗ್ಡೆಯ ಬಲಗೈ ಭಂಟನಾಗಿದ್ದರಿಂದ ನನಗೆ ತುಸು ಹೆಚ್ಚು ಸಲಿಗೆ ಇತ್ತು. ಕಾಮಾಂಧನಿಗೆ ಇಷ್ಟು ಸಲಿಗೆ ಸಾಕಲ್ಲವೇ... ಹೆಗ್ಡೇರ ಜೊತೆಗೆ ನನ್ನ ಸದರ ಅನೇಕರಿಗೆ ಕಣ್ಣು ಕೆಂಪು ಮಾಡಿತ್ತು. ಅವರ ಅಸೂಯೆ ಕಣ್ಣುಗಳನ್ನು ನಾನು ಕಂಡು ಒಳಗೊಳಗೇ ಭಯಗೊಂಡಿದ್ದೆ.

ಆ ದಿನ–

ಹೆಗ್ಡೇರ ಹೆಂಡತಿ ಸ್ನಾನಕ್ಕಿಳಿದಿದ್ದಳು. ಮಗಳು ಮಹಡಿಯಲ್ಲಿದ್ದಳು. ಕಳ್ಳ ಬೆಕ್ಕಿನಂತೆ ಹೋದೆ. ಬಾಗಿಲು ತೆರೆದಿತ್ತು. ಹಸಿದ ಹೆಬ್ಬುಲಿಯಂತೆ ನಾನು ಒಳಕ್ಕೆ ಹೋಗಿ ಬಾಗಿಲು ಹಾಕಿಕೊಂಡೆ. ಎಲ್ಲಾ ಮುಗಿಸಿ ಹೊರಬರಬೇಕೆಂದರೆ ಬಾಗಿಲು ತೆರೆಯುತ್ತಿಲ್ಲ.

ನಾನು ಮಾಲು ಸಹಿತ ಸಿಕ್ಕಿ ಬಿದ್ದಿದ್ದೆ.

ಸ್ವಲ್ಪ ಹೊತ್ತಿನ ನಂತರ ಬಾಗಿಲು ತೆರೆಯಿತು.

ನೋಡಿದರೇ– ಹೆಗ್ಡೇರು ಬಂದೂಕು ಹಿಡಿದು ನಿಂತಿದ್ದರು. ಅಡ್ಡ ಬಂದವಳೇ ಅವರ ಧರ್ಮಪತ್ನಿ. ಇರೋಳು ಒಬ್ಬಳೇ ಮಗಳು. ಈ ಮನೆತನಕ್ಕೆ ದಿಕ್ಕೇ ಅವಳು, ದೀಪವೂ ಅವಳೇ.... ನನಗೆ ಉಬ್ಬೆ ಬಂದಂತಾಗಿ ನಾನು ನಿಮ್ಮ ಮಗ ಅಂತ ತಿಳುಕೊಳ್ಳಿ... ಅಪ್ಪ ಇಲ್ಲ– ಅಮ್ಮ ಇಲ್ಲ, ಊರು ಇಲ್ಲ, ಮನೆ ಮಠ ಇಲ್ಲ– ನನಗೆ ನೀವಲ್ಲದೆ ಬೇರೆ ಯಾರೂ ಇಲ್ಲ... ಹಾಲಲ್ಲಾದರೂ ಹಾಕಿ ನೀರಲ್ಲಾದರೂ ಹಾಕಿ... ಅವರ ಹತ್ತಿರ ಹೋಗಿ ಕಾಲು ಹಿಡಿದುಕೊಂಡು ಬಿಟ್ಟೆ. ಹೆಗ್ಡೇರ ಮಗಳೂ ಕಾಲು ಹಿಡಿದು 'ನಾನು ಅವನನ್ನೇ ಮದುವೆಯಾಗೋದು– ನಾನು ಮೂರು ತಿಂಗಳಿಂದ ಮುಟ್ಟಾಗಲಿಲ್ಲ' ಎಂದಳು. ಹೆಗ್ಡೇರ ಬಂದೂಕು ಕೆಳಕ್ಕೆ ಬಿತ್ತು.

ಪರದೇಶಿ ಹುಡುಗನಿಗೆ ಮಗಳನ್ನು ಧಾರೆ ಎರೆದು ಅವನನ್ನು ಮನೆಯಲ್ಲೇ ಇಟ್ಟುಕೊಂಡ ಹೆಗ್ಡೇರ ಉದಾರ ಮನಸ್ಸನ್ನು ಸಮಸ್ತ ಮೂರು ಸೀಮೆಯ ಜನರು ಹಾಡಿ, ಹೊಗಳಿ 'ಉಘೆ ಉಘೆ' ಎಂದರು.

* * *

ಕೊನೆಯವರೆಗೂ ನಾನು ಈ ಗುಟ್ಟು ರಟ್ಟಾಗಲು ಬಿಡಲಿಲ್ಲ. ಈಗ ಈ ಇಳಿ ವಯಸ್ಸಿನಲ್ಲಿ ಮಗ ಬಂದು ನಾನು ಇಂಥವಳನ್ನು ಮದುವೆಯಾಗ್ತಾನೆ ಎಂದರೆ ನನ್ನ ಎದೆಯೇಕೆ ಬಿರಿಯುತ್ತದೆ. ಅವಳಿಗೆ ನನ್ನ ಗತ ಗೊತ್ತಿಲ್ಲ. ಗತ ಗೊತ್ತಿಲ್ಲದೇ ವರ್ತಮಾನ ಅರ್ಥವಾಗುವುದಿಲ್ಲ. ಇತಿಹಾಸ ಗೊತ್ತಿಲ್ಲದವನು ಇತಿಹಾಸ ಸೃಷ್ಟಿಸಲಾರ.

ಹೆಂಡತಿಯಲ್ಲಿ ಎಲ್ಲಾ ಹೇಳಲಾರೆ.

–ಹೇಳದೇ ಇದ್ದರೆ ಆಕೆಗೆ ಅರ್ಥವಾಗುವುದಿಲ್ಲ.

ಅರ್ಥವಾಗಲೇ ಬೇಕು.

ಅರ್ಥವಾಗದಿದ್ದರೆ ಮಗ ಸಂಪೂರ್ಣ ಅರ್ಥವಾಗುವುದಿಲ್ಲ.